1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.9202/2019

ದಿ: 03.01.2020 ರಂದು ಪ್ರಮಾಣೀಕರಿಸಲಾಯಿತು.

ಪ್ರಾಸಾ: 1

ಚಾಸಾ: 1

| | |
|---|---|
| ಹೆಸರು | : ಬಾಲರಾಜು |
| ತಂದೆಯ ಹೆಸರು | : ಭೀಮಪ್ಪ |
| ವಯಸ್ಸು | : 53 ವರ್ಷ |
| ಉದ್ಯೋಗ | : ಡಿವೈಎಸ್‌ಪಿ, ಸಿಐಡಿ, |
| ವಾಸ | : ಬೆಂಗಳೂರು. |

ಮುಖ್ಯ ವಿಚಾರಣೆ: ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು ನವೆಂಬರ್ 2016 ರಿಂದ ಅಕ್ಟೋಬರ್ 2018 ವರೆಗೆ ಡಿವೈಎಸ್‌ಪಿ ನಲ್ಲಿ ಎಸಿಬಿನಲ್ಲಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ. ದಿ: 11.10.2018 ರಂದು ಚಾಸಾ.2ರವರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಒಂದು ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರು ನಮ್ಮ ಕಾರ್ಯವ್ಯಾಪ್ತಿಗೆ ಬರದ ಕಾರಣ ಆರ್‌ಟಿನಗರ ಪೊಲೀಸ್ ಠಾಣೆಗೆ ನಾನು ಸ್ವತಃ ದೂರನ್ನು ಸಲ್ಲಿಸಿರುತ್ತೇನೆ, ಕಾರಣ ನನ್ನ ಹೆಸರಿನಲ್ಲಿ ಆರೋಪಿ ರೂ 50,000/- ಹಣವನ್ನು ಚಾಸಾ.2ರವರಿಂದ ಒತ್ತಾಯ ಮಾಡಿರುತ್ತಾರೆ. ಆ ಪ್ರಕಾರ ಸದರಿ ದೂರನ್ನು ಆರ್‌ಟಿ ನಗರ ಪೊಲೀಸ್ ಠಾಣೆಯವರು ಕ್ರೈಮ್ ನಂ.311/2018 ರಲ್ಲಿ ದಾಖಲು ಮಾಡಿರುತ್ತಾರೆ. ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು, ಚಾಸಾ.2ರವರು ನನಗೆ ಸಲ್ಲಿಸಿದ ದೂರನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

(ಕೋರಿಕೆಯ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗೆಂದು ಮುಂದೂಡಲಾಯಿತು.)

**ಪಿಡಬ್ಲ್ಯೂ: 1**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇ.**

1ನೇ ಅ. ಮು. ಮ. ದಂ. ನ್ಯಾಯಾಲಯ